

## ಬಾಳೆ ಸಿಸೇರಿಯನ್!

ಪ್ರಕೃತಿ ತನ್ನೊಳಗೆ ಅದೆಷ್ಟು ನಿಗೂಢತೆಗಳನ್ನು ಅಡಗಿಸಿಟ್ಟುಕೊಂಡಿದೆ ಎಂಬ ವಿಷಯ ನಮ್ಮ ಊಹೆಗೂ ನಿಲುಕದಾಗಿದೆ.

ಪ್ರಸಕ್ತ ಕ್ಷುಲ್ಲಕ ಅಣುಜೀವಿಯೊಂದು ಕೋವಿಡ್ 19 ಎಂಬ ಸೋಂಕು ರೋಗದೊಂದಿಗೆ ವಿಶ್ವವನ್ನೇ ಸ್ತಬ್ಧಗೊಳಿಸಿರುವ ವಾಸ್ತವ ಅದೆಂತು ಊಹಿಸಲಸಾಧ್ಯವಾಗಿತ್ತೋ ಅದೇ ರೀತಿ ಇಲ್ಲಿ ಬಾಳೆಗೊನೆಯೊಂದು ದಿಂಡಿನಿಂದ ಹೊರಬರದೆ ಒಳಗೇ ಅವಿತು ಹೂಬಿಟ್ಟು ಬಲಿತು ಹಣ್ಣಾಗುವ ಹಂತಕ್ಕೆ ತಲುಪಿರುವುದೂ ಅಷ್ಟೇ ಕೌತುಕ.

ಲಾಕ್ ಡೌನ್ ಕಾರಣ ಗೊನೆ ಹೊರಬರದೆ ತನ್ನ ದಿಂಡಿನಮನೆಯೊಳಗೇ ಸುರಕ್ಷಿತವಾಗಿರುವಂತೆ ಭಾಸವಾಗುತ್ತದೆ. ತಾಯಿಯ ಗರ್ಭದೊಳಗಿನ ಭ್ರೂಣದಂತಿದ್ದ ಈ ಗೊನೆಯನ್ನು ಕೊನೆಗೂ ದಿಂಡಿನ ಹೊರಪದರಗಳನ್ನು ಕತ್ತರಿಸುವ ಮೂಲಕ ಸಿಸೇರಿಯನ್ ಮಾಡಿ ಬಾಹ್ಯ ಪ್ರಪಂಚಕ್ಕೆ ಪರಿಚಯಿಸಲಾಗಿದೆ!

ಅಂದ ಹಾಗೆ ವಾಟ್ಸ್ಆ್ಯಪ್ ಗ್ರೂಪೊಂದರಲ್ಲಿ ಹರಿದು ಬಂದ ಈ ಆಶ್ಚರ್ಯಜನಕ ಚಿತ್ರದ ಮೂಲ ಮತ್ತಿತರ ವಿವರ ತಿಳಿದಿಲ್ಲ!

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಕಳ್ಳಿಯ ಮುಗುಳ್ನಗೆ!

ನಮ್ಮೂರ ಹಿರಿಯ ಪ್ರಾಥಮಿಕ ಶಾಲೆಯ ಸಮೀಪ ಪಾಳುಬಿದ್ದ ಮನೆಯ ಬೇಲಿಯಲ್ಲಿ ಮೈತುಂಬಾ ಮುಳ್ಳುಗಳನ್ನು ಹೊದ್ದ ಕಳ್ಳಿಯ ಗಿಡಗಳು ಬೆಳೆದು ನಿಂತಿವೆ. ಪ್ರತೀ ವರ್ಷ ವಸಂತ ಕಾಲದಲ್ಲಿ ಈ ಪಾಪಾಸು ಕಳ್ಳಿಗೂ ಹೂ ಬಿಡುವ ಹುಕ್ಕಿ ಬರುತ್ತದೆ. ಅರಳಿ ನಿಂತ ತಾವರೆಯನ್ನು ಹೋಲುವ ಹೂಗಳು ರಾತ್ರಿ ಅರಳಿ ಬೆಳಗ್ಗೆ ಬಿಸಿಲೇರುತ್ತಲೇ ಬಾಡಿ ಹೋಗುತ್ತವೆ. ವಿಶಿಷ್ಟ ಸುಗಂಧದ ಈ ಹೂಗಳೆಂದರೆ ಜೇನು ನೊಣಗಳು, ದುಂಬಿಗಳಿಗೂ ಅಚ್ಚುಮೆಚ್ಚು. ಮುಳ್ಳಿನ ಗಿಡದಲ್ಲಿ ಅಂದದ ಹೂವನ್ನು ನೋಡಿದಾಗ 'ಹರುಷ ಒಂದೇ ಯಾರಿಗುಂಟು ಹೇಳು ಜಗದಲಿ, ಹೂವು ಮುಳ್ಳು ಎರಡು ಉಂಟು ಬಾಳ ಲತೆಯಲಿ' ಎಂಬ ಕವಿವಾಣಿ ನೆನಪಿಗೆ ಬರುತ್ತದೆ.

—ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ





## ಮಳೆಗಾಲದ ಹಾಲ್ನೊರೆಗಳು

ಉತ್ತರಕನ್ನಡದ ಯಲ್ಲಾಪುರದಿಂದ ಇಡಗುಂದಿ ಮಾರ್ಗವಾಗಿ ಕೈಗಾ ಅಣುಸ್ಥಾವರದ ಕಡೆ ಸಾಗುವಾಗ ದಾರಿ ಮಧ್ಯೆ ಮನಮೋಹಕವಾದ ಸರಣಿ ಕಿರು ಜಲಪಾತಗಳು ಈ ಮಳೆಗಾಲದಲ್ಲಿ ಮೈದುಂಬಿಕೊಳ್ಳುತ್ತವೆ. ಹಸಿರು ಕಾಡಿನ ಹಾದಿಯಲ್ಲಿ ರಸ್ತೆಯ ಪ್ರತೀ ತಿರುವಿನಲ್ಲಿ ಬೆಟ್ಟದಿಂದ ಇಳಿಯುವ ಹಾಲ್ನೊರೆಯ ಜಲಪಾತವನ್ನು ವೀಕ್ಷಿಸುವುದೇ ರೋಮಾಂಚನಕಾರಿ ಅನುಭವ. ಹತ್ತಾರು ಕಿ.ಮೀ ದೂರ ಪ್ರಯಾಣಿಸುವಷ್ಟರಲ್ಲಿ ಇಂತಹ ನೂರಾರು ಕಿರು ಹಾಲ್ನೊರೆಗಳು ನಮ್ಮನ್ನು ಸ್ವಾಗತಿಸುವವು. ಕಿರಿದಾದದ ರಸ್ತೆಯಲ್ಲಿ ಆಗಾಗ ಮರಗಳು ಉರುಳಿ ಬೀಳುವ ಅಪಾಯಗಳೂ ಇವೆ.

—ದತ್ತಾತ್ರೇಯ ಭಟ್ಟ ಕಣ್ಣಿಪಾಲ, ಯಲ್ಲಾಪುರ